
# ಶ್ರೀಮಾತೆ

ಮೂಲ ಬಂಗಾಳಿ : **ಆಶುತೋಷ್ ಮಿತ್ರ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

## ಭಾಗ ೧೨



ಶ್ರೀಮಾತೆ ಎಲ್ಲ ಭಕ್ತರ ಮನದಾಸೆಯನ್ನು ಪೂರೈಸಿದರು, ಯಾರೊಬ್ಬರನ್ನೂ ದೂರವಿಡಲಿಲ್ಲ. ಆದರೆ ಅವರು ಮಣ್ಣಿನ ವಿಗ್ರಹವಲ್ಲ; ಮಾನವ ದೇಹವನ್ನು ಧರಿಸಿದ್ದಾರೆ. ಹಾಗಾಗಿ ಮಾನವ ದೇಹದ ನಿಯಮಗಳನ್ನು ಅವರು ಪಾಲಿಸಲೇಬೇಕಲ್ಲ. ಮೊದಲನೆಯದಾಗಿ, ಜಯರಾಮಬಾಟಿಯಲ್ಲಿದ್ದಾಗಲೇ ಅವರ ದೇಹಾರೋಗ್ಯ ಚೆನ್ನಾಗಿರಲಿಲ್ಲ. ಈಗ ಸಪ್ತಮಿಯ ರಾತ್ರಿಯ ಬಳಿಕ ಅದು ಇನ್ನಷ್ಟು ಹದಗೆಟ್ಟಿತು.

ಇನ್ನೀಗ ಮಹಾಷ್ಟಮಿ. ಸಂಪ್ರದಾಯದ ಪ್ರಕಾರ ಅಂದು ದುರ್ಗಾಪೂಜೆಯ ಅತ್ಯಂತ ಶ್ರೇಷ್ಠ ದಿನ. ಬೆಳಗಿನ ಜಾವ ಬಹಳ ಮೊದಲಿನಿಂದಲೇ ಭಕ್ತರು ಬಲರಾಮ ಬಾಬುವಿನ ಮನೆಯಲ್ಲಿದ್ದ ಶ್ರೀಮಾತೆಯವರ ಬಳಿಗೆ ಬರಲಾರಂಭಿಸಿದರು. ಸ್ತ್ರೀ ಭಕ್ತೆಯರು, ಪುರುಷ ಭಕ್ತರು, ತ್ಯಾಗೀ ಭಕ್ತರು, ಗೃಹಸ್ಥ ಭಕ್ತರು — ಹೀಗೆ ಬಿಡುವಿಲ್ಲದೆ ಬರುತ್ತಿದ್ದರು. ಹೂವನ್ನು ದುಂಬಿಗಳು ಮುತ್ತುವಂತೆ ಅವರೆಲ್ಲ ಶ್ರೀಮಾತೆಯನ್ನು ಮುತ್ತುತ್ತಿದ್ದರು. ಅವರ ಚರಣಕಮಲಗಳಲ್ಲಿ ತಮ್ಮ ಭಕ್ತಿ-ಅರ್ಘ್ಯಗಳನ್ನರ್ಪಿಸಿ, ಅದರ ಸವಿ ಮಕರಂದನ್ನು ಸಂಗ್ರಹಿಸಿ ಕುಡಿಯಬೇಕೆಂಬುದೇ ಎಲ್ಲರ ಆಸೆ. ಗಿರೀಶ ಭವನದಲ್ಲೂ ಅದೇ ರೀತಿ ನಡೆಯಿತು. ಶ್ರೀಮಾತೆ ಅನಾರೋಗ್ಯದಿಂದಿದ್ದರೂ, ಅವರು ಸ್ವಲ್ಪವೂ ವ್ಯಥೆಪಡಲಿಲ್ಲ; ಭಕ್ತರ ಇಚ್ಛೆಯನ್ನು ಪೂರೈಸಲು ದೇಹವನ್ನೆಲ್ಲ ಬಟ್ಟೆಯಿಂದ ಹೊದ್ದುಕೊಂಡು ಅಚಲವಾಗಿ ನಿಂತು ಅವರ ಪೂಜೆಯನ್ನು ಸ್ವೀಕರಿಸಿದರು. ಹೀಗೆ ಇಡೀ ದಿನ ಶ್ರಮಪಟ್ಟದ್ದರಿಂದಾಗಿ ಅವರಿಗೆ ಜ್ವರ ಕಾಣಿಸಿಕೊಂಡು, ಅವರು ಮಲಗಿಬಿಟ್ಟರು. ಈಗಾಗಲೇ ಶಿಥಿಲಗೊಂಡಿರುವ ದೇಹ, ಅದರ ಮೇಲಿನಿಂದ ಅಷ್ಟೊಂದು ಶ್ರಮ — ಸಂಧಿಪೂಜೆಯ ಸಮಯದಲ್ಲಿ ಅವರು ಭಾಗವಹಿಸುವುದು ಸಾಧ್ಯವಿಲ್ಲವೆಂದು ನಿಶ್ಚಯವಾಯಿತು. ಗಿರೀಶ ಹಾಗೂ ಅವನ ಅಕ್ಕನಿಗೆ ಈ ವಿಷಯವನ್ನು ಹೇಳಿ ಕಳುಹಿಸಲಾಯಿತು. ಅವರಿಬ್ಬರೂ ಆತಂಕದಿಂದ ಶ್ರೀಮಾತೆಯವರನ್ನು ಪ್ರಾರ್ಥಿಸತೊಡಗಿದರು.

ಆ ವರ್ಷದ ಸಂಧಿಪೂಜೆ, ಮಧ್ಯರಾತ್ರಿ ಹೊತ್ತು ಬೇರೆ. ನಾವು ನಿದ್ರಿಸುತ್ತಿದ್ದೆವು. ಗೋಲಾಪ್ ಮಾ ನಿದ್ದೆ ಬಿಟ್ಟೆದ್ದು ಹೇಳಿದಳು, ''ಶ್ರೀಮಾತೆಯವರನ್ನು ಕರೆದುಕೊಂಡು ಹೋಗಬೇಕು. ಶ್ರೀಮಾತೆ ಹೋಗುತ್ತಾರಂತೆ — ಈಗ ಅವರ ಪರಿಸ್ಥಿತಿ ಸುಧಾರಿಸಿದೆ.''

ಬಲರಾಮ ಬಾಬುವಿನ ಮನೆಯ ಪಶ್ಚಿಮ ಭಾಗದಲ್ಲಿದ್ದ ಚಿಕ್ಕ ಬೀದಿಯ ಮೂಲಕ ಶ್ರೀಮಾತೆ ಹಾಗೂ ಅವರ ಬಳಗದವರನ್ನು ಕರೆದುಕೊಂಡು ಹೋದೆ. ಶ್ರೀಮಾತೆಯವರ ದೇಹದಲ್ಲಿ ತ್ರಾಣವಿಲ್ಲದಿದ್ದರೂ, ಅವರು ಗಿರೀಶನಿಗೋಸ್ಕರ ಅಲ್ಲಿಗೆ ಹೋಗಲು ದೃಢಸಂಕಲ್ಪ ಮಾಡಿದ್ದರು ಎಂಬುದಾಗಿ ದಾರಿಯಲ್ಲಿ ಕೇಳಿ ತಿಳಿದೆ. ಅವರ ದೇಹದಲ್ಲಿ ಚಲಿಸುವ ಶಕ್ತಿಯಿರಲಿಲ್ಲ, ಆದರೂ ಅವರು ಬಲವಂತವಾಗಿ ಅದನ್ನು ಚಲಿಸುವಂತೆ ಮಾಡುತ್ತಿದ್ದರು. ಶ್ರೀರಾಮಕೃಷ್ಣರ ವೀರಭಕ್ತನಾದ ಗಿರೀಶಚಂದ್ರನ ಮರ್ಯಾದೆಯನ್ನು ಕಾಪಾಡುವುದಕ್ಕಾಗಿ ಶ್ರೀಮಾತೆ ಬಹಳ ಕಷ್ಟದಿಂದ ಓಡಾಡಿದರು. ಗಿರೀಶ ಭವನದಲ್ಲಿ ಬಾಗಿಲು, ಕಿಟಕಿಗಳನ್ನೆಲ್ಲ ಹಾಕಿದ್ದರು. ಅವರನ್ನು ಬೇಡಿಕೊಂಡು, ಕಿಟಕಿಬಾಗಿಲುಗಳನ್ನು ತೆರೆಯುವ ಸಲುವಾಗಿ ನಾನು ಪ್ರಧಾನದ್ವಾರದ ಮೂಲಕ ಒಳಹೋಕ್ಕು ನೋಡು ವಷ್ಟರಲ್ಲಿ ಶ್ರೀಮಾತೆ ಬಾಗಿಲ ಬಳಿ ನಿಂತು ಜೋರಾಗಿ ಹೇಳಿದರು, ''ನಾನು ಬಂದುಬಿಟ್ಟೆ!'' ಎಂಬುದಾಗಿ. ಗಿರೀಶ ಉತ್ಕಂಠೆಯಿಂದ ಬಾಗಿಲು ತೆರೆದುಕೊಟ್ಟ. ಅದರೊಂದಿಗೆ ಮನೆಯಲ್ಲೆಲ್ಲ ಗದ್ದಲವೆದ್ದಿತು, 'ಶ್ರೀಮಾತೆ ಬಂದುಬಿಟ್ಟರು, ಶ್ರೀಮಾತೆ ಬಂದುಬಿಟ್ಟರು!' ಎಂದು. ಗಿರೀಶಚಂದ್ರ ಆನಂದದಿಂದ ಭಾವವಿಹ್ವಲನಾದ. ಅಂದು ರಾತ್ರಿ ಕೂಡ ಭಕ್ತರ ಪೂಜೆ, ಪ್ರಣಾಮಗಳಿಗೆ ಕೊನೆಯಿರಲಿಲ್ಲ. ಹೀಗೆ ನವಮಿ, ದಶಮಿ ಕಳೆದವು. ಮಹಾಪೂಜೆ ಈ ರೀತಿ ಸಾಂಗವಾಗಿ ನೆರವೇರಿತು. ಇತ್ತ ಭಕ್ತವತ್ಸಲೆಯಾದ ಶ್ರೀಮಾತೆಯವರ ದೇಹ ಭಕ್ತಜನರಿಗೋಸ್ಕರ

ಸ್ವಲ್ಪಸ್ವಲ್ಪವೇ ಕ್ಷಯಿಸತೊಡಗಿತು. ಈ ರೀತಿ ಭಕ್ತರ ಗದ್ದಲದಲ್ಲಿ ಓಡಾಡಿ ಅವರಿಗೆ ಅಭ್ಯಾಸವಿರಲಿಲ್ಲ. ಅವರು ಕಲ್ಕತ್ತೆಯಿಂದ ಮರಳಿ ಹೋಗುವ ಬಯಕೆಯನ್ನು ವ್ಯಕ್ತ ಪಡಿಸಿದರು. ಆದರೆ ಅವರು ಬಯಸಿದ ಮಾತ್ರಕ್ಕೇ ಕೆಲಸ ಕೈಗೂಡ ದಲ್ಲ. ಅವರು ಭಕ್ತರಿಗೆ ಸೇರಿದವರು. ಭಕ್ತರ ಸಮ್ಮತಿಯೂ ಬೇಕು. ಭಕ್ತರ ಸಮ್ಮತಿ ಪಡೆಯಲು ಕೆಲವು ದಿನ ಬೇಕಾಯಿತು.

ಕಾಳೀಪೂಜೆಯ ನಂತರವೇ ಹೊರಡಲು ಅವರಿಗೆ ಸಾಧ್ಯ ವಾಯಿತು. ಶ್ರೀಮಾತೆಯವರು ಹೊರಡುವ ದಿನ ನಿಶ್ಚಯವಾದ ಕೂಡಲೇ ಕಾಳೀಮಾವನಿಗೆ ಒಂದರ ಮೇಲೆ ಇನ್ನೊಂದು ಪತ್ರ ಬರೆಯಲಾಯಿತು. ಶ್ರೀಮಾತೆ ಮರಳುವ ದಿನದಂದು ಊರಿನ ಜನರನ್ನು ಹಾಗೂ ಪಲ್ಲಕ್ಕಿ ಸಿಕ್ಕಿದರೆ ಪಲ್ಲಕ್ಕಿಯೊಂದಿಗೆ, ದೇಶಡಾ ಗ್ರಾಮದಲ್ಲಿ ಮೊದಲೇ ಅವರು ತಯಾರಿರಬೇಕೆಂದು ಆ ಪತ್ರ ದಲ್ಲಿ ನಿರ್ದೇಶಿಸಲಾಯಿತು. ಶ್ರೀಮಾತೆ ಸುಲಭವಾಗಿ ಹೋಗಿ ತಲುಪುವಂತೆ, ಯಾವುದೇ ತೊಂದರೆಯಾಗದಂತೆ ವ್ಯವಸ್ಥೆ ಮಾಡಲು ಬರೆದು ತಿಳಿಸಲಾಗಿತ್ತು. ಒಂದೇ ವಿಷಯವಿರುವ ಎರಡು ಪತ್ರಗಳನ್ನು ಎರಡು ದಿನಗಳಲ್ಲಿ ಕಳುಹಿಸಿದ್ದೇಕೆಂದರೆ, ಕಾಳೀಮಾವನಿಗೆ ಕಳುಹಿಸಿದ ಪತ್ರ ಏನೋ ಕಾರಣದಿಂದ ತಲು ಪದೆ ಹೋದರೆ, ಇನ್ನೊಂದಾದರೂ ತಲುಪಬಹುದಲ್ಲ— ಎಂದು.

ಇರಲಿ; ಯಥಾಸಮಯಕ್ಕೆ ಹೊರಟು , ವಿಷ್ಣುಪುರ ಹಾಗೂ ಕೊತುಲ್‌ಪುರ ಮೂಲಕ ದೇಶಡಾ ಗ್ರಾಮವನ್ನು ದಾಟಿ, ಬಯ ಲಿಗೆ ಬಂದಾಗ ಸೂರ್ಯಾಸ್ತವಾಗಿತ್ತು. ಮೊದಲನೆಯದಾಗಿ, ಶ್ರೀಮಾತೆಯವರ ಆರೋಗ್ಯ ಅತ್ಯಂತ ಕೆಟ್ಟುಹೋಗಿತ್ತು; ಇನ್ನು ತಮ್ಮಂದಿರ ಸಂಸಾರದ ನಡುವೆ ಇದ್ದುಬಿಟ್ಟರೆ ಅವರಿಗೆ ಇನ್ನಷ್ಟು ಪರಿಶ್ರಮವುಂಟಾಗುವುದು. ಈ ಕಾರಣಗಳಿಂದ ಅವರ ಸೇವೆಗಾಗಿ ಈ ಬಾರಿ ಗೋಲಾಪ್ ಮಾ ಹಾಗೂ ಕುಸುಮ ಬಂದಿದ್ದರು. ವಿಷ್ಣುಪುರದಿಂದ ಎತ್ತಿನ ಗಾಡಿಯಲ್ಲೇ ಎಲ್ಲರೂ ದೇಶಡಾದ ವರೆಗೆ ಹೋಗಿದ್ದೆವು.

ದೇಶಡಾದ ಬಯಲಿಗೆ ಹೋಗಿ ನೋಡಿದಾಗ, 'ಕಾಕಸ್ಯ ಪರಿ ವೇದನಾ' ಎಂಬಂತಾಯಿತು. ಪಲ್ಲಕ್ಕಿಯ ವಿಷಯ ಹಾಗಿರಲಿ, ಕಾಳೀಮಾವನೂ ಕಾಣಿಸಲಿಲ್ಲ; ಹೆಚ್ಚಿನ ಆಳುಗಳೂ (ಸೇವಾ ಕಾರ್ಯ ಮಾಡುವವರು) ಕಾಣಸಿಗಲಿಲ್ಲ. ತೋಟದ ದಪ್ಪದ ಆರು ಮಂದಿಯಲ್ಲಿ ಒಬ್ಬನೂ ಇರಲಿಲ್ಲ. ಅಲ್ಲಿಂದ ಎತ್ತಿನ ಗಾಡಿ ಯಲ್ಲೇ ಹೋಗಬೇಕಿದ್ದರೆ ಸಿಹೋರ್ ಮೂಲಕ ಸುತ್ತಿ ಬಳಸಿ ಹೋಗಬೇಕಿತ್ತು. ರಸ್ತೆಯಾದರೋ ತುಂಬಾ ಕೆಟ್ಟುಹೋಗಿತ್ತು. ಜೋರಾಗಿ ಅಲುಗಾಟ ಅನಿವಾರ್ಯ. ಅದರ ಮೂಲಕ ಶ್ರೀಮಾತೆ ಯವರನ್ನು ಕರೆದುಕೊಂಡು ಹೋಗುವುದಂತೂ ಉಚಿತವಲ್ಲ. ಅವರಿಗೆ ತುಂಬಾ ಕಷ್ಟವಾಗುವುದು. ಅವರೂ ಅದಕ್ಕೆ ಒಪ್ಪಲಿಲ್ಲ. ಕೊನೆಗೆ ಎಲ್ಲರಿಗೂ ಒಪ್ಪಿಗೆಯಾದದ್ದು ಏನೆಂದರೆ, ಗಾಡಿಗಳನ್ನು ಗೋಲಾಪ್ ಮಾ ಹಾಗೂ ಇವರ ಜೊತೆಗೆ, ಉಳಿದೆಲ್ಲ ಸಾಮಾನು ಗಳೊಂದಿಗೆ ಸಿಹೋರ್ ಮೂಲಕ ಕಳುಹಿಸುವುದು; ನಾವು ಮನೆಗೆ ಹೋಗಿ ಕೆಲಸದವರನ್ನು ಕಳುಹಿಸಿಕೊಡುವುದು. ಅವರು ಸಿಹೋರ್‌ಗೆ ಹೋಗಿ ಗಾಡಿಗಳೊಂದಿಗೆ ಮರಳುವುದು ಎಂದು ನಿರ್ಧಾರವಾಯಿತು. ದೇಶಡಾದ ಬಯಲನ್ನು ಹಾಗೂ ನದಿ ಯಾಚೆಗೆ ಜಯರಾಮಬಾಟಿಯ ಸಣ್ಣ ಬಯಲನ್ನು ಶ್ರೀಮಾತೆ ಕಾಲುನಡಿಗೆಯ ಮೂಲಕವೇ ದಾಟಬಹುದು. ಶ್ರೀಮಾತೆಯವರ ಠಾಕೂರರಿಗೋಸ್ಕರ (ಅವರ ಭಾವಚಿತ್ರ) ಒಂದು ಕಪ್ಪುಬಣ್ಣದ, ಸಣ್ಣ ಟಿನ್ನಿನ ಬಾಕ್ಸ್ ಇತ್ತು. ಎಲ್ಲಾದರೂ ಪ್ರಯಾಣ ಮಾಡುವ ಸಂದರ್ಭದಲ್ಲಿ ಅದರೊಳಗೆ ಠಾಕೂರ್, ಗೋಪಾಲ, ಸಿಂಹ ವಾಹಿನಿಯ ಮಣ್ಣಿನ ಪೊಟ್ಟಣ, ಜಪದ ಮಾಲೆ ಇತ್ಯಾದಿಗಳನ್ನು ಇಟ್ಟು, ಆಟಿಕೆಯ ಮಂಚದಂತೆ ಒಂದು ಸಣ್ಣ ಮಂಚ – ಅದರಲ್ಲಿ ಠಾಕೂರರ ಹಾಸಿಗೆ ಇವನ್ನೆಲ್ಲ ಒಯ್ಯುತ್ತಿದ್ದರು.

ಗಾಡಿಗಳನ್ನು ಮೊದಲೇ ಹೇಳಿದಂತೆ ಕಳುಹಿಸಿಕೊಟ್ಟು, ಶ್ರೀಮಾತೆಯವರ ಆದೇಶದಂತೆ ಠಾಕೂರ್ ಹಾಗೂ ರಾಧು ಇವರನ್ನು ನಾನು ಹೊತ್ತುಕೊಂಡು ಹೊರಟೆ. ಶ್ರೀಮಾತೆ ಒಬ್ಬರೇ ನಡೆಯುತ್ತ ಹೋಗಬಲ್ಲರು ಎಂದು ಭಾವಿಸಿಕೊಂಡು, ರಾಧು ವನ್ನು ಹೆಗಲಲ್ಲಿ ಹೊತ್ತುಕೊಂಡು, ಠಾಕೂರರ ಬಾಕ್ಸ್ ಹಾಗೂ ಮಂಚವನ್ನು ಇನ್ನೊಂದು ಕೈಯಲ್ಲಿಟ್ಟುಕೊಂಡು, ಮತ್ತೊಂದು ಕೈಯಲ್ಲಿ ಶ್ರೀಮಾತೆಯವರನ್ನು ಆಧರಿಸಿ ಹಿಡಿದುಕೊಂಡು ನಾನು ಹೊರಟೆ. ಸಣ್ಣತ್ತೆ ಹಿಂದಿನಿಂದ ನಡೆಯತೊಡಗಿದರು. ರಸ್ತೆ ಎಲ್ಲ ರಿಗೂ ಚೆನ್ನಾಗಿ ಗೊತ್ತಿತ್ತು, ವಿಶೇಷವಾಗಿ ಸಣ್ಣತ್ತೆಗೆ. ಸ್ವಲ್ಪ ದೂರ ಹೋಗುವಷ್ಟರಲ್ಲೇ ಆಕೆ, ''ಈ ದಾರಿ ಎಲ್ಲಿಗೆ ಹೋಗುತ್ತದೆ? ಈ ದಾರಿಯಲ್ಲೇ ಬಾ'' ಎನ್ನತೊಡಗಿದಳು. ಮಾವ ಬಾರದೆ ಇದ್ದು ದಕ್ಕೆ ಅಥವಾ ಜನರನ್ನು ಕಳುಹಿಸದೆ ಇದ್ದುದಕ್ಕೆ ಶ್ರೀಮಾತೆ ತುಂಬಾ ಕೋಪಿಸಿಕೊಂಡಿದ್ದರು. ಅದರಿಂದ ಅವರು ಅನ್ಯಮನಸ್ಕರಾಗಿ ದ್ದರು. ಅವರೆಂದರು, ''ನಿಜ, ಆ ಕಡೆಗೇ ಹೋಗು. ಸಣ್ಣತ್ತೆಗೆ ಈ ದಾರಿ ಎಲ್ಲ ಗೊತ್ತು. ಅವಳಂತೂ ಬಯಲೆಲ್ಲ ಓಡಾಡುತ್ತಿರು ತ್ತಾಳೆ.'' ಆ ದಾರಿ ನನಗೂ ಚೆನ್ನಾಗಿ ಗೊತ್ತಿತ್ತು. ಆದರೂ ಆಗ ನನ್ನ ಬುದ್ಧಿ ಕೆಲಸ ಮಾಡದೆ, ಅವರು ತೋರಿಸಿಕೊಟ್ಟ ದಾರಿಯಲ್ಲೇ ನಡೆದೆ. ಪರಿಣಾಮವಾಗಿ, ನದೀತೀರದ ಘಾಟ್ ಇಲ್ಲದಲ್ಲಿ , ಇಳಿಯಲಾಗದ ಜಾಗಕ್ಕೆ ಬಂದು ತಲುಪಿದೆವು. ಆಗ ಬೆಳಕೂ ಇರಲಿಲ್ಲ, ಕತ್ತಲಲ್ಲಿ ಎಲ್ಲಿಗೆ ಬಂದುಬಿಟ್ಟೆವು ಎಂದೂ ತಿಳಿಯಲಿಲ್ಲ.

ಶ್ರೀಮಾತೆ ಕೋಪಗೊಂಡು ಬಯ್ಯತೊಡಗಿದರು. ಆಗ ನಾನಂದೆ, ''ನೀವು ಇಲ್ಲೇ ಸ್ವಲ್ಪ ಇರಿ, ನಾನು ನದಿಯ ದಂಡೆ ಯಲ್ಲೇ ಹೋಗಿ ಘಾಟ್ ಎಲ್ಲಿದೆ ಎಂದು ನೋಡಿ ಬರುತ್ತೇನೆ. ಆಮೇಲೆ ನಿಮ್ಮನ್ನು ಕರೆದುಕೊಂಡು ಹೋಗುತ್ತೇನೆ.'' ಅದಕ್ಕೆ ಒಪ್ಪದೆ ಶ್ರೀಮಾತೆ, ''ಗೊತ್ತುಗುರಿಯಿಲ್ಲದ ಬಯಲಲ್ಲಿ ನಾವು ಹೇಗೆ ನಿಲ್ಲಬೇಕು? ನೀನು ಹೋಗಬೇಡ'' ಎಂದರು. ಅನಂತರ ಅವರು ಇನ್ನಿಲ್ಲದಂತೆ ಬಯ್ಯತೊಡಗಿದರು. ಮನೆ ತಲುಪುವ ವರೆಗೂ ಬಯ್ಯುತ್ತಲೇ ಇದ್ದರು. ಅಷ್ಟು ದೀರ್ಘಕಾಲ ಅವರು ಬೈದದ್ದನ್ನು ನಾನೆಂದೂ ನೋಡಿಲ್ಲ.

ಇರಲಿ, ಆ ಜಾಗದಲ್ಲೇ ನದಿಯನ್ನು ದಾಟಿದೆವು. ನದಿಯಲ್ಲಿ ನೀರಿರಲಿಲ್ಲ ಎಂದರೂ ಸರಿಯೆ. ನದಿ ದಾಟಿ ನಡೆಯತೊಡಗಿದೆವು. ಆದರೆ ನಾವು ಜಯರಾಮಬಾಟಿಯ ಕಡೆಗೆ ಹೋಗುತ್ತಿದ್ದೆವೋ, ಅಥವಾ ಶಿಹೋರ್ ಕಡೆಗೋ ಎಂದು ಗೊತ್ತಾಗಲಿಲ್ಲ. ಶ್ರೀಮಾತೆಯವರಿಗೆ ನಡೆಯುವುದು ಕಷ್ಟವಾಗುತ್ತಿತ್ತು. ನಡೆಯುತ್ತಾ ನಾನು ಎಷ್ಟೊಂದು ಬೈಗುಳ ತಿಂದೆ!

''ನೀನೇಕೆ ಗಂಡು ಹುಡುಗನಾಗಿ ಹುಟ್ಟಿದೆ? ನಮ್ಮ ಮಾತನ್ನೇಕೆ ಕೇಳಿದೆ? ನೀನು ಹುಡುಗಿಯಾಗಿದ್ದರೇ ಚೆನ್ನಾಗಿತ್ತು'' ಇತ್ಯಾದಿ. ಶ್ರೀಮಾತೆಯವರ ಬೈಗುಳದಿಂದ ಶಿಷ್ಯಂದಿರಿಗೆ ಏನೂ ಹಾನಿಯಾಗದು. ಅದು ಅವರ ಪಾಲಿಗೆ ಮಂಗಳಕರವೇ. ಅವರ ಮನಸ್ಸು ಬೈಗುಳದತ್ತ ಇರುತ್ತಿರಲೇ ಇಲ್ಲ, ತಮ್ಮ ಕಷ್ಟದ ಕಡೆಗೆ ಇತ್ತು.

ಹೀಗೆ ಮುಂದುವರಿಯುತ್ತಿರುವಾಗ ದೂರದಲ್ಲೊಂದು ಬೆಳಕಿನ ರೇಖೆ ಕಾಣಿಸಿಕೊಂಡಿತು. ಎಲ್ಲರೂ ಕೂಗಿ ಕರೆಯತೊಡಗಿದೆವು: ''ಯಾರದು ಬೆಳಕು ಬೀರುತ್ತಿದ್ದೀರಿ? ಇಲ್ಲಿ ನಮ್ಮ ಕಡೆಗೆ ತುಸು ತೋರಿಸಿ — ನಮಗೆ ದಾರಿ ತಪ್ಪಿದೆ!'' ಬೆಳಕು ನಮ್ಮ ಕಡೆಗೇ ಬಂತು. ಶ್ರೀಮಾತೆ ಕೇಳಿದರು, ''ಯಾರು ನೀನು?'' ದೀಪವನ್ನು ಕೈಯಲ್ಲಿ ಹಿಡಿದಿದ್ದ ಹೆಂಗಸು ಶ್ರೀಮಾತೆಯವರನ್ನು ಗುರುತಿಸಿ, ''ಯಾರು, ಶಾರು (ಶಾರದೆ) ಅಲ್ಲವೆ?''ಎಂದು ಕೇಳಿದಳು. ಶ್ರೀಮಾತೆ, ''ಯಾರು ಆಶುವಿನ ತಾಯಿಯೆ?'' ಎಂದು ಕೇಳಿದರು. ಆಶುವಿನ ತಾಯಿ ಶ್ರೀಮಾತೆಗೆ ಪ್ರಣಾಮ ಮಾಡಿ, ''ನೀವು ಮಕ್ಕಳು ಸರಿಯಾದ ದಾರಿಯಲ್ಲೇ ಬಂದಿದ್ದೀರಿ. ಆದರೆ ಸ್ವಲ್ಪ ಸುತ್ತಿಕೊಂಡು ಬಂದಿದ್ದೀರಿ ಅಷ್ಟೆ. ಅದಕ್ಕೇ ಊರ ಹೊರಗೆ ಬಂದು ತಲುಪಿಬಿಟ್ಟಿರಿ'' ಎಂದಳು. ಅವಳು ದೀಪವನ್ನು ಕೈಯಲ್ಲಿ ಹಿಡಿದು, ದಾರಿ ತೋರಿಸಿಕೊಟ್ಟು ಹೋದಳು. ಎರಡು ಮೂರು ನಿಮಿಷಗಳೊಳಗಾಗಿ ಊರನ್ನು ಸೇರಿದೆವು.

ಮನೆ ತಲುಪಿದ ಕೂಡಲೇ ಶ್ರೀಮಾತೆ ತಮ್ಮನ ಮಕ್ಕಳ ಬಳಿ ನೀರು ಕೇಳಿದರು. ಹೊರಜಗಲಿಯಲ್ಲಿ ಕುಳಿತು ಒಂದು ಲೋಟ ನೀರು ಕುಡಿದರು. ಗಾಡಿಗಳನ್ನು ಕರೆತರಲು ಕೆಲಸದವರನ್ನು ಕಳುಹಿಸಿ, ಕಾಳೀಮಾವನನ್ನು ಬಯ್ಯಲಾರಂಭಿಸಿದರು. ಕಾಳೀಮಾವ ಪತ್ರ ತಲುಪಿದ್ದಾಗಿ ಒಪ್ಪಿಕೊಂಡರು; ಕೆಲಸದವರನ್ನು ಕಳುಹಿಸದೆ ಇದ್ದುದಕ್ಕೆ ಏನೇನೋ ನೆಪ ಹೇಳಿದರು. ಪಲ್ಲಕ್ಕಿ ಸಿಗಲಿಲ್ಲವೆಂದರು. ಒಂದು ಗಂಟೆಯೊಳಗಾಗಿ ಕೆಲಸದವರು ಗಾಡಿಗಳನ್ನು ಕರೆದುಕೊಂಡು ಬಂದರು. ಅಷ್ಟರಲ್ಲಿ ಶ್ರೀಮಾತೆ ತುಸು ಸುಧಾರಿಸಿಕೊಂಡು, 'ಶಿಷ್ಯನಿಗೆ ಬೈದುಬಿಟ್ಟೆನಲ್ಲಾ' ಎಂದು ಭಾವಿಸಿ, ನನ್ನ ತಲೆಯ ಮೇಲೆ ಕೈಯಾಡಿಸತೊಡಗಿದರು. ನಾನು ಅವರ ಪಾದ ಧೂಳಿಯನ್ನು ಹಣೆಯಲ್ಲಿ ಧರಿಸಿಕೊಂಡೆ.

ಒಂದು ದಿನ ಗೋಲಾಪ್ ಮಾ ಶ್ರೀಮಾತೆಯವರ ಬಳಿ ಕುಳಿತುಕೊಂಡು ಶಾರದಾ ಮಹಾರಾಜರ ವಿಷಯವಾಗಿ ಕತೆ ಹೇಳುತ್ತಿದ್ದರು: ''ಯೋಗಿನ್ (ಯೋಗಿನ್ ಮಾ) ಒಂದು ಸಲ 'ಉದ್ಬೋಧನ'ಕ್ಕಾಗಿ ತುಂಬ ಖಾರವಿರುವ ಮೆಣಸಿನಕಾಯಿ ತರಲು ಶಾರದನಿಗೆ ಹೇಳಿದಳು. ಅವನು ಬಾಗ್‌ಬಜಾರಿನಿಂದ ಆರಂಭಿಸಿ, ಎಲ್ಲ ಅಂಗಡಿಗಳಿಗೂ ಹೋಗಿ ಮೆಣಸು ತಿಂದು ರುಚಿ ನೋಡತೊಡಗಿದ — ಖಾರವಿದೆಯೇ ಇಲ್ಲವೇ ಅಂತ. ಹೀಗೆ ತಿಂದು ತಿಂದು ಖಾರವಾದ ಮೆಣಸಿನಕಾಯಿ ಸಿಗದಿದ್ದಾಗ ಬಡೋಬಜಾರಿಗೆ ಹೋದ. ಅಲ್ಲಿ ಖಾರವಾದ ಮೆಣಸು ಸಿಕ್ಕಿತು, ಎರಡಾಣೆಗೆ ಅದನ್ನು ಕೊಂಡು ತಂದ. ಕೂಡಲೇ ಅವನ ನಾಲಿಗೆಯಲ್ಲಿ ಗುಳ್ಳೆಯೆದ್ದಿತು. ಅಬ್ಬಾ, ಏನು ಗುರುಭಕ್ತಿ! ''

ಒಂದು ದಿನ ಶ್ರೀಮಾತೆ ಸ್ನಾನ ಮುಗಿಸಿ, ಕೊಡದಲ್ಲಿ ನೀರು ತುಂಬಿ ತಮ್ಮ ಮನೆಯ ಹೊರಜಗುಲಿಯಲ್ಲಿಟ್ಟರು. ಅದೇಕೆಂದು ಕೇಳಿದಾಗ ತಿಳಿಯಿತು, ಇತರ ಹುಡುಗಿಯರಂತೆ ಅವರೂ ಚಿಕ್ಕ ವಯಸ್ಸಿನಲ್ಲಿ ಕೊಡವನ್ನು ಹಿಡಿದುಕೊಂಡು ಈಜಾಡುವುದನ್ನು ಕಲಿತಿದ್ದರಂತೆ.

ವೃಂದಾವನದಿಂದ ಶ್ರೀಮಾತೆ ಹಿತ್ತಾಳೆಯ ಒಂದು ಗೋಪಾಲನ ವಿಗ್ರಹವನ್ನು ತಂದಿದ್ದರು. ನಾವು ಈ ವಿಗ್ರಹವನ್ನು ಶ್ರೀಮಾತೆಯವರ ಠಾಕೂರರ ಚಿತ್ರವಿಟ್ಟಿರುತ್ತಿದ್ದ ಸಿಂಹಾಸನದಲ್ಲಿ ಪ್ರತಿನಿತ್ಯವೂ ನೋಡುತ್ತಿದ್ದೆವು. ಒಂದು ದಿನ ಈ ಗೋಪಾಲನ ವಿಷಯವಾಗಿ ಏನು ಹೇಳಿದರೋ ಅದನ್ನಿಲ್ಲಿ ನೀಡುತ್ತಿದ್ದೇನೆ: ''ಮೊದಲು ಅದನ್ನು ಹಾಗೇ ಇಟ್ಟುಬಿಟ್ಟಿದ್ದೆ. ಒಂದು ದಿನ ಮಲಗಿದ್ದೆ, ನೋಡುತ್ತಿದ್ದಂತೆ ಗೋಪಾಲ ತೆವಳುತ್ತ ಮಂಚದ ಬಳಿಗೆ ಬಂದು, 'ನನ್ನನ್ನು ಕರೆದುಕೊಂಡು ಬಂದೆ, ಹಾಗೇ ಬಿಸಾಡಿ ಬಿಟ್ಟಿದ್ದೀಯೆ, ನನಗೆ ಹಸಿವಾಗದೆ? ತಿನ್ನಲು ಕೊಡಲಾರೆಯಾ?' ಎಂದು ಹೇಳಿದ. ಅದನ್ನು ಕೇಳಿ ನಾನೆಂದೆ, 'ಇಲ್ಲ ಮಗೂ, ತಿನ್ನಲು ಕೊಡುತ್ತೇನೆ, ಇಲ್ಲವೆ ಮತ್ತೆ?' ಆ ಬಳಿಕ ಅವನಿಗೂ ತಿನ್ನಲು ಕೊಡಬೇಕಾಗಿ ಬಂತು.''

ಸ್ವಾಮೀಜಿಯವರ ಮೂರು ಜನ ವಿದೇಶೀ ಮಹಿಳೆಯರು ಶ್ರೀಮಾತೆಗೆ ಅಮೆರಿಕಾದಿಂದ ಪತ್ರ ಬರೆಯುತ್ತಿದ್ದರು. ಕವರಿನ ಮೇಲೆ ನನ್ನ ಈಗಿನ ಹೆಸರು ಹಾಗೂ ವಿಳಾಸ ಬರೆದು, ಒಳಗೆ ಶ್ರೀಮಾತೆಯವರನ್ನು ಸಂಬೋಧಿಸಿ ಪತ್ರ ಬರೆಯುತ್ತಿದ್ದರು. ನಾನು ಅದನ್ನು ಅನುವಾದ ಮಾಡಿ ಶ್ರೀಮಾತೆ ಜಯರಾಮಬಾಟಿಯಲ್ಲಿದ್ದರೆ ಅಲ್ಲಿಗೆ ಕಳುಹಿಸುತ್ತಿದ್ದೆ; ಕಲ್ಕತ್ತೆಯಲ್ಲಿದ್ದರೆ ಅವರಿಗೆ ಓದಿ ಹೇಳುತ್ತಿದ್ದೆ. ಶ್ರೀಮಾತೆ ಹೇಗೆ ಉತ್ತರ ಬರೆಯಲು ಹೇಳುತ್ತಿದ್ದರೋ ಹಾಗೆ ಉತ್ತರ ಬರೆಯುತ್ತಿದ್ದೆ.

ಶ್ರೀಮಾತೆಯವರ ಇಂಥ ಒಂದು ಪತ್ರದ ಮಾದರಿಯನ್ನು ಇಲ್ಲಿ ಉದ್ಧರಿಸುತ್ತಿದ್ದೇನೆ. ಇದನ್ನು ಹೇಳುವುದರ ಉದ್ದೇಶವೇನೆಂದರೆ, ಶ್ರೀಮಾತೆ ಆಗ ಜಯರಾಮಬಾಟಿಯಲ್ಲಿದ್ದರು; ನಾನು ಕಲ್ಕತ್ತೆಯಲ್ಲಿದ್ದೆ:

''ಮಗೂ ಆಶು, ನೀನು ದೇವಮಾತಾಗೆ (ವಿದೇಶಿ ಮಹಿಳೆ)[೧] ನನ್ನ ಆಶೀರ್ವಾದವನ್ನು ತಿಳಿಸು. ಹಾಗೇ ನನಗೆ ಶ್ರೀಗಂಧದ ಬಾಕ್ಸನ್ನು ಕೊಟ್ಟಿದ್ದ (ವಿದೇಶಿ ಮಹಿಳೆ) ಆಕೆಗೂ[೨] ನನ್ನ ಆಶೀರ್ವಾದ ತಿಳಿಸು. ತಾಯಿ ನಿಮ್ಮನ್ನೆಲ್ಲ ಆಶೀರ್ವದಿಸಿದ್ದಾರೆ ಅಂತ ಹೇಳು. ದೇವಮಾತಾ ಹಾಗೂ ಜಯಾಗೆ, ಹಾಗೂ ಬಾಕ್ಸ್ ಕೊಟ್ಟವಳಿಗೆ ಏನೇನು ಬರೆಯಬೇಕೋ ಅದನ್ನು ನನ್ನ ಹೆಸರಿನಲ್ಲಿ ನೀನೇ ಬರೆ.

ಇತಿ, ತಾರೀಖು ೧ನೇ ಮಾಘ ೧೩೧೬ (ಕ್ರಿ.ಶ. ೧೯೦೯)

ಆಶೀರ್ವಾದಗಳೊಂದಿಗೆ,

ನಿನ್ನ ತಾಯಿ.''

ಶ್ರೀಮಾತೆಯವರು ವಾತದಿಂದಾಗಿ ನಡುನಡುವೆ ತುಂಬಾ ಕಷ್ಟಕ್ಕೊಳಗಾಗುತ್ತಿದ್ದರು. ಯಾರು ಏನೇ ಔಷಧವನ್ನು ಹೇಳಲಿ, ಮಾಡಿಬಿಡುತ್ತಿದ್ದರು. ಔಷಧವಿರಲಿ, ದೈವಿಕವಾದ ಆಚರಣೆಯಿರಲಿ ಯಾವುದನ್ನೂ ಬಿಡಲಿಲ್ಲ. ಕೆಳಗಿನ ಪತ್ರವೇ ಇದಕ್ಕೆ ನಿದರ್ಶನ. ಶ್ರೀಮಾತೆ ವಾತದಿಂದ ಅತ್ಯಂತ ಕಷ್ಟಪಡುತ್ತಿದ್ದಾರೆ ಎಂದು ತಿಳಿದ ನಾನು ಅವರನ್ನು ಜಯರಾಮಬಾಟಿಯಿಂದ ಕಲ್ಕತ್ತೆಗೆ ಕರೆದುಕೊಂಡು ಬರಲು ಅಲ್ಲಿಗೆ ಹೋಗುವುದಾಗಿ ಪತ್ರ ಬರೆದಿದ್ದೆ. ಉತ್ತರವಾಗಿ ಶ್ರೀಮಾತೆ ಬರೆದಿದ್ದರು:

''ನನ್ನ ಕಾಲಿನ ವಾತ ಸ್ವಲ್ಪ ವಾಸಿಯಾದಂತೆ ಅನ್ನಿಸುತ್ತದೆ. ಆದ ಕಾರಣ ಸತ್ಯನಾರಾಯಣನ ಔಷಧವನ್ನು ಹಚ್ಚಿಕೊಂಡಿದ್ದೇನೆ. ಆದ ಕಾರಣ ಅದೇ ವಿಶೇಷವೆಂದು ಅನ್ನಿಸುತ್ತಿದೆ.''

ಇದೇ ರೀತಿ ಒಂದು ಸಲ ಅವರ ವಾತ ಹೆಚ್ಚಾದಾಗ ಶರತ್ ಮಹಾರಾಜರು ಕಲ್ಕತ್ತೆಯಿಂದ ನನಗೆ ಪತ್ರ ಬರೆದಿದ್ದರು. ಆಗ ನಾನು ಜಯರಾಮಬಾಟಿಯಲ್ಲಿದ್ದೆ:

''...ಶ್ರೀಮಾತೆಯವರ ವಾತದ ವಿಷಯವನ್ನು ಕೇಳಿ ನನಗೆ ಚಿಂತೆಯಾಗಿದೆ. ಕಡಿಮೆಯಾಗಿದೆಯೇ ಇಲ್ಲವೇ ಎಂದು ಬರೆದು ತಿಳಿಸುವ ಮೂಲಕ ನೆಮ್ಮದಿ ನೀಡು. ಇನ್ನೊಂದು ಸಣ್ಣ ಸೀಸೆಯಲ್ಲಿ ಹುಲಿಯ ಕೊಬ್ಬಿನ ಎಣ್ಣೆಯನ್ನು ತುಂಬಿ ಕೂಡಲೇ ಕಳುಹಿಸಿ ಕೊಡುತ್ತೇನೆ. ಅದು ವಾತಕ್ಕೆ ಬಹಳ ಒಳ್ಳೆಯದು ಅಂತ ಕೇಳಿದ್ದೇನೆ. ಮಾಲಿಶ್ ಮಾಡಬೇಕಾದೀತು. ಅವರು ಇಲ್ಲಿಂದ ಹೋದ ಮೇಲೆ ಎಲ್ಲವೂ ಶೂನ್ಯವಾಗಿದೆ. ಫಾಲ್ಗುಣ ಮಾಸದಲ್ಲಿ ಅವರನ್ನು ಕರೆದುಕೊಂಡು ಬರಬಹುದಾದರೆ ತುಂಬ ಒಳ್ಳೆಯದು. ಈಗಲೇ ವಾತ ಹೆಚ್ಚಾಗಿದೆ — ಚಳಿಗಾಲದಲ್ಲಿ ಏನಾದೀತೋ ಗೊತ್ತಿಲ್ಲ , ತುಂಬ ಕಷ್ಟವಾಗಬಹುದೇನೋ!

ಕಲ್ಕತ್ತಾ, ೨೭-೧೧-೧೯೦೯''

ನನ್ನ ಇಬ್ಬರು ಸ್ನೇಹಿತರಾದ ಡಾಕ್ಟರ್ ಕಂಜೀಲಾಲ್ ಹಾಗೂ ಲಲಿತ ಇಬ್ಬರನ್ನೂ ಶ್ರೀಮಾತೆಯವರು ವಿಶೇಷವಾಗಿ ಪ್ರೀತಿಸುತ್ತಿದ್ದರು ಎಂಬ ಸೂಚನೆಯನ್ನು ಈ ಹಿಂದೆಯೇ ನೀಡಲಾಗಿದೆ.

೧ ಮಿಸ್. ಲೌರಾ ಎಫ್. ಗ್ಲೆನ್ *(-ಸಂ.)*

೨ ಮಿಸ್. ಜೊಸೆಫಿನ್ ಮ್ಯಾಕ್ಲೌಡ್. ಶ್ರೀಮಾತೆ ಅವಳನ್ನು 'ಜಯಾ' ಎಂದು ಕರೆಯುತ್ತಿದ್ದರು. *(-ಸಂ.)*

ನಿಜವಾಗಿಯೂ ಅವರಿಬ್ಬರೂ ಶ್ರೀಮಾತೆಯವರ ಪ್ರೀತಿಯ ಶಿಷ್ಯರಾಗಿದ್ದರು. ಲಲಿತನಿಗೆ ಅನಾರೋಗ್ಯವುಂಟಾದ ವಾರ್ತೆಯನ್ನು ಕೇಳಿ ಶ್ರೀಮಾತೆ ಯಾವ ರೀತಿ ವಿಹ್ವಲಗೊಳ್ಳುತ್ತಿದ್ದರು ಎಂಬುದನ್ನು ನಾನು ಈ ಕೆಲವು ಪತ್ರಗಳ ಮೂಲಕ ತಿಳಿಸುತ್ತೇನೆ:

೧) ''ಲಲಿತನ ಅನಾರೋಗ್ಯದ ವಿಚಾರವನ್ನು ಕೇಳಿ ನನಗೆ ಎಷ್ಟೊಂದು ಸಂಕಟವಾಯಿತು ಎಂಬುದನ್ನು ಬರೆದು ತಿಳಿಸಲು ಸಾಧ್ಯವಿಲ್ಲ. ನಾನು ಇಲ್ಲಿಂದಲೇ ಅವನಿಗಾಗಿ ಠಾಕೂರರ ಬಳಿ ಪ್ರಾರ್ಥನೆ ಮಾಡುತ್ತೇನೆ, ಬೇಗನೆ ಅವನು ಆರೋಗ್ಯವಂತನಾಗಿ ಚೇತರಿಸಿಕೊಳ್ಳಲಿ ಎಂಬುದಾಗಿ. ಇದೇ ನನ್ನ ಪ್ರಾರ್ಥನೆ.''

ದಿನಾಂಕ: ೬ನೇ ಪೌಷ, ೧೩೧೬ (ಕ್ರಿ.ಶ.೧೯೦೯)

೨)''ಅಂತೆಯೇ, ಲಲಿತ ಹೇಗಿದ್ದಾನೆಂದು ಬರೆದು ತಿಳಿಸು.''

ದಿನಾಂಕ: ೫ನೇ ಮಾಘ ೧೩೧೬ (ಕ್ರಿ.ಶ.೧೯೦೯)

ಸ್ನೇಹಿತ ಡಾಕ್ಟರ್ ಕಂಜೀಲಾಲನ ಜೊತೆಗೆ ನಾನೊಮ್ಮೆ ಜಯರಾಮಬಾಟಿಗೆ ಹೋಗಬೇಕಾಗಿ ಬಂತು. ಇತರ ಸಾಮಾನುಗಳೊಂದಿಗೆ ಶ್ರೀಮಾತೆಯವರಿಗೆ ಅನಾನುಕೂಲತೆ ಹಾಗೂ ಚಿಂತೆ ಕಡಿಮೆ ಮಾಡುವ ಉದ್ದೇಶದಿಂದ ಡಾಕ್ಟರಿಗೋಸ್ಕರ ಚಹಾ, ವಿದೇಶೀ ಹಾಲು, ಸಕ್ಕರೆ, ಮೈದಾ, ತುಪ್ಪ, ರವೆ ಇವನ್ನೆಲ್ಲ ತೆಗೆದುಕೊಂಡು ಹೋಗಿದ್ದೆ. ಹಳ್ಳಿಯ ಜನರ ಚಿಕಿತ್ಸೆಗಾಗಿ ಡಾಕ್ಟರ್ ಕೆಲವು ಔಷಧಗಳನ್ನೂ ಒಯ್ದಿದ್ದರು.

ಡಾಕ್ಟರ್‌ನನ್ನು ನೋಡಿ ಶ್ರೀಮಾತೆಯವರಿಗಾದ ಆನಂದ ಹೇಳತೀರದು. ಕಲ್ಕತ್ತೆಯ ಮೆಡಿಕಲ್ ಕಾಲೇಜಿನ ಡಾಕ್ಟರ್ ಬಂದಿದ್ದಾರೆ ಎಂದು ಜನರ ನಡುವೆ ಸುದ್ದಿ ಹರಡಿ, ದೂರದೂರದ ಊರುಗಳಿಂದ ಅನೇಕ ಮಂದಿ ಜನ ಬರುತ್ತಿದ್ದರು. ಆಗ ಶ್ರೀಮಾತೆ ಹೇಳುತ್ತಿದ್ದರು, 'ನನ್ನ ಗುಣವಂತನಾದ ಮಗ ಬಂದಿದ್ದಾನೆ — ಜನ ಬರಲಾರರೆ?' ಎಂದು. ಅವರಿಂದ ಹಲವು ಮಂದಿ ಜನರಿಗೆ ಉಪಕಾರವಾಯಿತು. ಒಬ್ಬ ಸದ್ಗೋಪ ಕುಲದ ರೋಗಿಗೆ ಶಸ್ತ್ರ ಚಿಕಿತ್ಸೆ ಮಾಡಿಸಿ ಅವನು ಬದುಕಿ ಉಳಿದ. ಗುರುನಿವಾಸದಲ್ಲಿ ಸಂತೋಷವಾಗಿ ಕೆಲವು ದಿನಗಳನ್ನು ಕಳೆದ ಡಾಕ್ಟರ್, ಕಲ್ಕತ್ತೆಗೆ ಹಿಂದಿರುಗಿದರು. ಹೋಗುವಾಗ ಕೆಲವು ವಿದೇಶಿ ಪೇಟೆಂಟ್ ಔಷಧಿಗಳ ಮಾದರಿಯನ್ನು ಅಲ್ಲೇ ಇಟ್ಟುಹೋದರು. ಅದರಿಂದ ಜನರಿಗೆ ಉಪಕಾರವಾದೀತು ಎಂದು. ಅವರನ್ನು ಬೀಳ್ಕೊಡುವಾಗ ಶ್ರೀಮಾತೆ ಅವರೊಂದಿಗೆ ಗ್ರಾಮದ ಹೊರಭಾಗದವರೆಗೂ ಹೋಗಿ ಬಿಟ್ಟು ಬಂದರು. ***(ಮುಂದುವರಿಯುವುದು)***

**ಭಗವಂತ ನಮ್ಮವನೇ. ಅವನೊಂದಿಗೆ ನಮ್ಮದು ಶಾಶ್ವತವಾದ ಸಂಬಂಧ. ಅವನು ಎಲ್ಲರಿಗೂ ಸೇರಿದವನು. ವ್ಯಕ್ತಿಯು ತನ್ನ ಹಂಬಲಕ್ಕೆ ತಕ್ಕಂತೆ ಅವನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾನೆ.**

— ಶ್ರೀಮಾತೆ ಶಾರದಾದೇವಿ